## ಕೆ.ಎಲ್.ಇ. ಸಂಸ್ಥೆಯ
## ಲಿಂಗರಾಜ ಮಹಾವಿದ್ಯಾಲಯ, ಬೆಳಗಾವಿ

**-:ಅಲ್ಪಾವಧಿ ಐಟಂವಾರು ಟೆಂಡರ ಆಮಂತ್ರಣ ನೋಟಿಸು (ಎರಡನೇ ಕರೆ) ದ್ವಿಲಕೋಟೆ ಪದ್ಧತಿ :-**

ದಿನಾಂಕ : 25.08.2009 ಸಂಖ್ಯೆ: ಗುತ್ತಿಗೆ/ಕಟ್ಟಡ/09-10

1) ಈ ಕೆಳಕಂಡ ಸೂಚಿಪಟ್ಟಿಯಲ್ಲಿ ವಿವರಿಸಲಾದ ಕಟ್ಟಡ ನಿರ್ಮಾಣ ಕಾಮಗಾರಿಗಳಿಗಾಗಿ ಗುತ್ತಿಗೆಗಳನ್ನು ಪ್ರಾಂಶುಪಾಲರು, ಕೆ.ಎಲ್.ಇ. ಸಂಸ್ಥೆಯ ಲಿಂಗರಾಜ ಮಹಾವಿದ್ಯಾಲಯ, ಬೆಳಗಾವಿ ಇವರ ಪರವಾಗಿ ಸೂಕ್ತ ದರ್ಜೆಯ ಪಿ.ಡಬ್ಲ್ಯು.ಡಿ/ಸಿ.ಪಿ.ಡಬ್ಲ್ಯು.ಡಿ/ಎಮ್.ಇ.ಎಸ್ ಇಲಾಖೆಯ ನೋಂದಾಯಿತ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ಸ್ ಕೆ.ಡಬ್ಲ್ಯು-4 ರಲ್ಲಿ ದ್ವಿಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಪಾರದರ್ಶಕತೆ ಅಧಿನಿಯಮದನ್ವಯ ಆಮಂತ್ರಿಸಲಾಗಿದೆ. ಗುತ್ತಿಗೆದಾರರು ಕೆಳಕಂಡ ಕಾಮಗಾರಿಗಳಲ್ಲಿ ಯಾವುದಾದರೂ ಅಥವಾ ಎಲ್ಲಾ ಕಾಮಗಾರಿಗಳಿಗೆ ಗುತ್ತಿಗೆಗಳನ್ನು ಸಲ್ಲಿಸಬಹುದಾಗಿದೆ.

2) ಗುತ್ತಿಗೆದಾರರು ಗುತ್ತಿಗೆಯ ದಸ್ತಾವೇಜುಗಳನ್ನು (ಎರಡು ಸೆಟ್‌ಗಳಲ್ಲಿ) ಪ್ರಾಂಶುಪಾಲರು, ಕೆ.ಎಲ್.ಇ. ಸಂಸ್ಥೆಯ ಲಿಂಗರಾಜ ಮಹಾವಿದ್ಯಾಲಯ, ಬೆಳಗಾವಿ ಇವರ ಕಚೇರಿಯಿಂದ ಕಚೇರಿಯ ಕೆಲಸದ ವೇಳೆಯಲ್ಲಿ ಈ ಕೆಳಕಂಡ ಪಟ್ಟಿಯಲ್ಲಿ ಸೂಚಿಸಿದ ಬೆಲೆಯಲ್ಲಿ ನಗದು ಹಣ ಪಾವತಿಸಿ ಖರೀದಿಸಬಹುದು (ಫಾರ್ಮ ಬೆಲೆಯನ್ನು ಯಾವುದೇ ಕಾರಣಕ್ಕೆ ಹಿಂದಿರುಗಿಸುವುದಿಲ್ಲ) ಆಸಕ್ತಿ ಹೊಂದಿರುವ ಗುತ್ತಿಗೆದಾರರು ಇದಕ್ಕಿಂತಲೂ ಹೆಚ್ಚಿನ ವಿವರಗಳನ್ನು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ, ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು. ಟೆಂಡರದಾರರ ಕೋರಿಕೆಯ ಮೇರೆಗೆ ಅಂಚೆ ವೆಚ್ಚ ರೂ.200/- ಗಳನ್ನು ಗುತ್ತಿಗೆದಾರರಿಂದ ಭರಣಾ ಮಾಡಿಕೊಂಡು ಟೆಂಡರ ದಸ್ತಾವೇಜುಗಳನ್ನು ರಜಿಸ್ಟರ್ಡ್ ಪೋಸ್ಟ್ ಎ.ಡಿ./ಸ್ಪೀಡ್ ಪೋಸ್ಟ್ ಅಂಚೆಯ ಮೂಲಕ ಕಳುಹಿಸಲಾಗುವುದು. ಸದರಿ ಟೆಂಡರ ದಸ್ತಾವೇಜುಗಳು ಅಂಚೆಯಲ್ಲಿ ವಿಳಂಬದಿಂದ ಸರಿಯಾದ ಸಮಯದಲ್ಲಿ ಗುತ್ತಿಗೆದಾರರಿಗೆ ತಲುಪದೇ ಇದ್ದಲ್ಲಿ ಇದಕ್ಕೆ ಪ್ರಾಂಶುಪಾಲರು, ಕೆ.ಎಲ್.ಇ. ಸಂಸ್ಥೆಯ ಲಿಂಗರಾಜ ಮಹಾವಿದ್ಯಾಲಯ, ಬೆಳಗಾವಿ ಇವರು ಹೊಣೆಗಾರರಾಗಿರುವುದಿಲ್ಲ. ಇದಕ್ಕೆ ಸ್ವತಃ ಗುತ್ತಿಗೆದಾರರೇ ಹೊಣೆಗಾರರಾಗಿರುತ್ತಾರೆ.

3) ಈ ಕೆಳಗಿನ ಸೂಚಿಪಟ್ಟಿಯಲ್ಲಿ ಟೆಂಡರ್ ಕಾಮಗಾರಿಗೆ ನಿಗದಿಪಡಿಸಿದ ಮುಂಗಡ ಠೇವಣಿ ಹಣವನ್ನು ಪ್ರಾಂಶುಪಾಲರು, ಕೆ.ಎಲ್.ಇ. ಸಂಸ್ಥೆಯ ಲಿಂಗರಾಜ ಮಹಾವಿದ್ಯಾಲಯ, ಬೆಳಗಾವಿ ಇವರ ಹೆಸರಿನಲ್ಲಿ ಬೆಳಗಾವಿಯಲ್ಲಿ ಹಣ ಪಾವತಿ ಆಗುವಂತೆ ಬ್ಯಾಂಕರ್ಸ್ ಚೆಕ್ / ಡಿಮಾಂಡ್ ಡ್ರಾಫ್ಟ್ ಗುತ್ತಿಗೆ ಸಲ್ಲಿಸಿದ ದಿನಾಂಕದಿಂದ ಗುತ್ತಿಗೆದಾರರ ಗುತ್ತಿಗೆ ದರಗಳ ಮಾನ್ಯತಾ ಅವಧಿಗಿಂತ 45 ದಿನಗಳವರೆಗೆ ಹೆಚ್ಚಿನ ಅವಧಿಯವರೆಗೆ ಅಂದರೆ 135 ದಿನಗಳವರೆಗೆ ಚಲಾವಣೆಯಲ್ಲಿರುವಂತೆ ಟೆಂಡರ್‌ದೊಂದಿಗೆ ಲಗತ್ತಿಸಿ, ಸಲ್ಲಿಸಬೇಕು.

4) ಟೆಂಡರ್‌ಗಳನ್ನು ಪ್ರಾಂಶುಪಾಲರು, ಕೆ.ಎಲ್.ಇ. ಸಂಸ್ಥೆಯ ಲಿಂಗರಾಜ ಮಹಾವಿದ್ಯಾಲಯ, ಬೆಳಗಾವಿ ಇವರ ಕಚೇರಿಯಲ್ಲಿ ದಿನಾಂಕ 17.09.2008 ರಂದು ಅಪರಾಹ್ನ 4.00 ಗಂಟೆಯವರೆಗೆ ಏಕಕಾಲಕ್ಕೆ ಸ್ವೀಕರಿಸಲಾಗುವುದು. ಮತ್ತು ಹಾಜರಿದ್ದ ಗುತ್ತಿಗೆದಾರರ ಸಮ್ಮುಖದಲ್ಲಿ ಅದೇ ದಿನಾಂಕದಂದು ಅಪರಾಹ್ನ 4.30 ಗಂಟೆಗೆ (ಸಾಧ್ಯವಾದರೆ) ಪ್ರಾಂಶುಪಾಲರು, ಕೆ.ಎಲ್.ಇ. ಸಂಸ್ಥೆಯ ಲಿಂಗರಾಜ ಮಹಾವಿದ್ಯಾಲಯ, ಬೆಳಗಾವಿ ಇವರ ಕಚೇರಿಯಲ್ಲಿ ತೆರೆಯಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸಲು ನಿಗದಿಪಡಿಸಿದ ದಿನಾಂಕದಂದು ಸಾರ್ವತ್ರಿಕ ರಜೆ ಸಂಭವಿಸಿದ ಪಕ್ಷದಲ್ಲಿ ಅದಕ್ಕೆ ಬದಲಾಗಿ ಮರುದಿನ ಕಚೇರಿ ಕೆಲಸದ ದಿನದಂದು ಈ ಮೇಲೆ ನಿಗದಿಪಡಿಸಿದ ಸಮಯಕ್ಕೆ ಮತ್ತು ಅದೇ ಸ್ಥಳದಲ್ಲಿ ಗುತ್ತಿಗೆಗಳನ್ನು ಸ್ವೀಕರಿಸಲಾಗುವುದು ಮತ್ತು ತೆರೆಯಲಾಗುವುದು.

5) ಇನ್ನಿತರ ವಿವರಗಳನ್ನು ಗುತ್ತಿಗೆದಾರರು ಟೆಂಡರ್ ದಸ್ತಾವೇಜಿನಲ್ಲಿ ನೋಡಬಹುದು.

| | | |
|---|---|---|
| 1) | ಖುಲ್ಲಾ ಟೆಂಡರ್ ಫಾರ್ಮಗಳಿಗೆ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ | 17.09.2009 ಸಾಯಂಕಾಲ 5.30 ಗಂಟೆಯವರೆಗೆ |
| 2) | ಖಾಲಿ ಟೆಂಡರ್ ಫಾರ್ಮಗಳನ್ನು ನೀಡುವ ದಿನಾಂಕ | 22.09.2009 ಸಾಯಂಕಾಲ 5.30 ಗಂಟೆಯವರೆಗೆ |
| 3) | ಸೀಲ್ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ | 25.09.2009 ಅಪರಾಹ್ನ 4.00 ಗಂಟೆಯವರೆಗೆ |
| 4) | ತಾಂತ್ರಿಕ ಬಿಡ್ ಟೆಂಡರ್‌ಗಳನ್ನು ತೆರೆಯುವ ದಿನಾಂಕ | 25.09.2009 ಅಪರಾಹ್ನ 4.30 ಗಂಟೆಯ ನಂತರ (ಸಾಧ್ಯವಾದಲ್ಲಿ) |

# ಸೂಚಿಪಟ್ಟಿ

| ಕ್ರ. ಸಂ. | ಕಾಮಗಾರಿಗಳ ಹೆಸರು | ಕೆಲಸದ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಮುಂಗಡ ಠೇವಣಿ ಹಣ (ರೂ. ಗಳಲ್ಲಿ) | ಟೆಂಡರ್ ದಸ್ತಾವೇಜುಗಳ ಬೆಲೆ (ರೂ.ಗಳಲ್ಲಿ) | ಕಾಮಗಾರಿ ಪೂರ್ಣಗೊಳಿಸುವ ಕಾಲಾವಧಿ |
|---|---|---|---|---|---|
| | ಲಿಂಗರಾಜ ಮಹಾವಿದ್ಯಾಲಯದ ಮಹಿಳಾ ವಸತಿ ನಿಲಯದ 2ನೇ ಮಹಡಿ, 3ನೇ ಮಹಡಿ, 4ನೇ ಮಹಡಿ ಕಟ್ಟಡ ಕಾಮಗಾರಿ – ಯು.ಜಿ.ಸಿ. ಮಂಜೂರಾತಿ 10ನೇ ಯೋಜನೆ ಅಡಿಯಲ್ಲಿ | 1,05,11,384/- | 1,57,671/- | 2000/- | 11 ತಿಂಗಳು |

## ಶರತ್ತುಗಳು :

1) ಅಪೂರ್ಣ ಟೆಂಡರ್‌ಗಳನ್ನು ಯಾವುದೇ ಅವಕಾಶ ನೀಡದೇ ತಿರಸ್ಕರಿಸಲಾಗುವುದು.
2) ಅರ್ಜಿ ಸಲ್ಲಿಸಿದ ಗುತ್ತಿಗೆದಾರರು ಖಾಲಿ ಟೆಂಡರ್ ಫಾರ್ಮಗಳನ್ನು ಪಡೆಯುವ ವೇಳೆಗೆ ತಮ್ಮ ಗುತ್ತಿಗೆ ನೋಂದಣಿ ಪುಸ್ತಕವನ್ನು ಪ್ರಸ್ತುತ ಪಡಿಸಿದ ನಂತರವೇ ಖಾಲಿ ಟೆಂಡರ್ ಫಾರ್ಮಗಳನ್ನು ನೀಡಲಾಗುವುದು.
3) ಯಾವುದೇ ಕಾರಣ ನೀಡದೇ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ನಿರಾಕರಿಸುವ ಹಕ್ಕನ್ನು ಪ್ರಾಂಶುಪಾಲರು, ಕೆ.ಎಲ್.ಇ. ಸಂಸ್ಥೆಯ ಲಿಂಗರಾಜ ಮಹಾವಿದ್ಯಾಲಯ, ಬೆಳಗಾವಿ ಅವರು ಕಾಯ್ದಿರಿಸಿಕೊಂಡಿರುತ್ತಾರೆ.
4) ಖಾಲಿ ಟೆಂಡರ್ ಫಾರ್ಮಗಳಿಗೆ ತುಂಬಿದ ಹಣವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸುವುದಿಲ್ಲ ಮತ್ತು ಬೇರೆ ಕೆಲಸಗಳಿಗೆ ವರ್ಗಾಯಿಸುವುದಿಲ್ಲ.

ಪ್ರಾಂಶುಪಾಲರು,
ಲಿಂಗರಾಜ ಮಹಾವಿದ್ಯಾಲಯ, ಬೆಳಗಾವಿ

1) ಪ್ರಕಟಣೆಯ ಪ್ರತಿಯನ್ನು ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಟೆಂಡರ್ ಬುಲೆಟಿನ್ ಅಧಿಕಾರಿಗಳು, ಬೆಳಗಾವಿ ಇವರಿಗೆ ಸದರಿ ಟೆಂಡರ್ ಅಧಿಸೂಚನೆಯನ್ನು ಟೆಂಡರ್ ಬುಲೆಟಿನಲ್ಲಿ ಪ್ರಕಟಿಸಲು ಆದರಪೂರ್ವಕವಾಗಿ ಸಲ್ಲಿಸಲಾಗಿದೆ.
2) ಪ್ರತಿಯನ್ನು ಕೆ.ಎಲ್.ಇ. ಸಂಸ್ಥೆಯ ರೆಸಿಡೆಂಟ್ ಇಂಜಿನೀಯರರು/ಪ್ರಚಾರಫಲಕ
3) ಪ್ರತಿಯನ್ನು ಮೇ./ಶ್ರೀ.

ಸ್ಥಳ : ಬೆಳಗಾವಿ
ದಿನಾಂಕ : 01-09-2009

ಪ್ರಾಂಶುಪಾಲರು,
ಲಿಂಗರಾಜ ಮಹಾವಿದ್ಯಾಲಯ, ಬೆಳಗಾವಿ